ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) –

ಅ) ಮತ್ತು ಆ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ವತಿಯಿಂದ ಬ್ಯಾಟರಾಯನಪುರ ನಗರ ಸಭೆ ವ್ಯಾಪ್ತಿಯಲ್ಲಿ ಒಂದು ಸಗಟು ತರಕಾರಿ ಮಾರುಕಟ್ಟೆಯನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ.

ಉಳಿದ ನಗರ ಸಭೆಗಳ ವ್ಯಾಪ್ತಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ವತಿಯಿಂದ ತರಕಾರಿ ಹರಾಜು ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿರುವುದಿಲ್ಲ.

1331 (1271) : ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾವ ರೈತರು ಒಣಭೂಮಿ ಹೊಂದಿರುತ್ತಾರೋ ಮತ್ತು ಯಾವ ರೈತರು ಆರ್ಥಿಕವಾಗಿ ಹಿಂದುಳಿದಿದ್ದು ಅಂತಹ ರೈತರ ಒಣ ಭೂಮಿಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

ಆ) ರೈತರು ಕಾನೂನು ಬಾಹಿರವಾಗಿ ವಿದ್ಯುತ್ ಸಂಪರ್ಕವನ್ನು ಅಳವಡಿಸಿಕೊಂಡಿದ್ದನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆಯಿದೆಯೆ ; ಹಾಗಿದ್ದಲ್ಲಿ, ಈ ಬಗ್ಗೆ ಔಪಚಾರಿಕ ಕಾರ್ಯಗಳೇನು ;

ಇ) ರೈತರಿಗಾಗಿ ಉಚಿತವಾಗಿ ವಿದ್ಯುತ್‌ನ್ನು ನೀರಾವರಿ ಸೌಲಭ್ಯಕ್ಕಾಗಿ ನೀಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ; ಹಾಗಿದ್ದಲ್ಲಿ, ಇದರ ಮಾನದಂಡವೇನು ?

ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು) –

ಅ) ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಲ್ಲಿ ಒಣಭೂಮಿ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಆಯ್ಕೆ ಮಾಡುವಾಗ ಆ ಪ್ರದೇಶದಲ್ಲಿರುವ ಆರ್ಥಿಕವಾಗಿ ಹಿಂದುಳಿದ ರೈತರ ಸಂಖ್ಯೆ, ಪರಿಶಿಷ್ಟ ಜಾರಿ ಪರಿಶಿಷ್ಟ ಪಂಗಡದ ರೈತರ ಸಂಖ್ಯೆ, ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಇವೇ ಮೊದಲಾದವುಗಳನ್ನು ಆಧಾರವಾಗಿಟ್ಟು ಕೊಂಡು ಅನುದಾನದ ಲಭ್ಯತೆ ಆಧಾರದ ಮೇಲೆ ಪ್ರದೇಶವನ್ನು ಆಯ್ಕೆ ಮಾಡಿ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಆ) ಹೌದು, ಸರ್ಕಾರವು ಕಾನೂನು ಬಾಹಿರ ಐ.ಪಿ. ಸೆಟ್‌ಗಳನ್ನು ದಿನಾಂಕ 31.7.06ರ ವರೆಗೆ ಸಕ್ರಮಗೊಳಿಸಲು ಅವಕಾಶ ನೀಡಿದೆ.

ಸಕ್ರಮಗೊಳಿಸಲು ಈ ಕೆಳಕಂಡ ಔಪಚಾರಿಕಗಳನ್ನು ಅನುಸರಿಸಲಾಗುತ್ತಿದೆ.

1. ಅನಧಿಕೃತವಾಗಿ ಐ.ಪಿ.ಸೆಟ್ ನ್ನು ಅಳವಡಿಸಿರುವ ರೈತರು ಕ್ರಮಬದ್ಧಗೊಳಿಸುವ ಸಲುವಾಗಿ ಸ್ವಯಂ ದೃಢೀಕರಣ ಪತ್ರ ನೀಡಬೇಕಾಗಿರುತ್ತದೆ.

2. ನಿಗಧಿತ ನಮೂನೆ ಅರ್ಜಿಯನ್ನು ರೂ.50/- ನೊಂದಣಿ ಶುಲ್ಕದೊಂದಿಗೆ ಸಲ್ಲಿಸಬೇಕು.

3. ಪ್ರತಿ ಅನಧಿಕೃತ ಐ.ಪಿ. ಸೆಟ್‌ನ್ನು ಸಕ್ರಮಗೊಳಿಸಲು ರೂ.10,000/- ಗಲನ್ನು ಪಾವತಿಸಬೇಕು.

4. ಐ.ಪಿ. ಸೆಟ್‌ನ ಹೆಚ್‌ಪಿ (HP) ಸಂಬಂಧಿಸಿದಂತೆ ಭದ್ರತಾ ಠೇವಣಿಯನ್ನು ಪಾವತಿಸಬೇಕು.

5. ಮುಕ್ತಾಯ ವರದಿ ಹಾಗೂ ವೈರಿಂಗ್ ರೂಪರೇಷಗಳನ್ನು ಅಧಿಕೃತ ವಿದ್ಯುತ್ ಗುತ್ತಿಗೆದಾರರಿಂದ ಪಡೆದು ನಿಗಧಿಪಡಿಸಿದ ಮುಚ್ಚಳಿಕೆಯೊಂದಿಗೆ ಸಲ್ಲಿಸಬೇಕು.

ಇ) ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಸರಬರಾಜು ಮಾಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

1332 (1335) : ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯ ಬೆಲೆ ಅಂಗಡಿಗಳಲ್ಲಿ ಇತರೆ ಪದಾರ್ಥಗಳನ್ನು ಗ್ರಾಹಕರ ಉಪಯೋಗಕ್ಕಾಗಿ ಮಾರಾಟ ಮಾಡಲು ಹಿಂದಿನ ಸರ್ಕಾರ ಅನುಮತಿ ನೀಡಿರುವುದು ಸರ್ಕಾರದ ಗಮನದಲ್ಲಿದೆಯೇ; ಅನುಮತಿ ಚಾಲನೆಯಲ್ಲಿದೆಯೇ ; ಹಾಗಿದ್ದಲ್ಲಿ, ವಿವರ ನೀಡುವುದು ;

ಆ) ಸೀಮೆಎಣ್ಣೆಯು ತಿಂಗಳಿನಲ್ಲಿ ಒಂದು ಬಾರಿ ಮಾತ್ರ ಗ್ರಾಹಕರಿಗೆ ವಿತರಣೆಯಾಗುತ್ತಿದ್ದು ಇದರಿಂದ ಗ್ರಾಹಕರಿಗೆ ತೊಂದರೆಯಾಗುತ್ತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಗ್ರಾಹಕರ ಉಪಯೋಗಕ್ಕಾಗಿ ತಿಂಗಳಿನಲ್ಲಿ 7 ದಿನ ಸೀಮೆಎಣ್ಣೆಯನ್ನು ವಿತರಣೆ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

ಇಲ್ಲದಿದ್ದಲ್ಲಿ, ಏಕೆ ;

ಇ) 2004ನೇ ಸಾಲಿನಿಂದ ಎಷ್ಟು ಬಿಪಿಎಲ್ ಮತ್ತು ಎಪಿಎಲ್ ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಇದರಲ್ಲಿ ಎಷ್ಟು ಕಾರ್ಡುಗಳನ್ನು ವಿತರಿಸಲಾಗಿದೆ, ಎಷ್ಟು ಅರ್ಜಿಗಳು ಬಾಕಿ ಇವೆ ;